e	ಬಳ್ಳಾರಿ ಪ್ಯಾಕೇಜ್	28 34
f	ನಬಾರ್ಡ್ ರಸ್ತೆಗಳು	5750 00
g	ನಬಾರ್ಡ್ ಸೇತುವೆಗಳು	1000 00
h	ಕೇಂದ್ರ ರಸ್ತೆ ನಿಧಿಯಡಿ ಕಾಮಗಾರಿಗಳು	4000 00
i	ಮಂಡ್ಯ ಪ್ಯಾಕೇಜ್	1416 92
	ಒಟ್ಟು	39981 10
j	3054 ರಸ್ತೆ ಮತ್ತು ಸೇತುವೆ (ಮುಖ್ಯಮಂತ್ರಿ ಗ್ರಾಮೀಣಾ ರಸ್ತೆ ಅಭಿವೃದ್ಧಿ ನಿಧಿ)	12351 65
k	3054–12ನೇ ಹಣಕಾನು	10013 00

308 (640) ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ (ಕೊಪ್ಪಳ) ಮತ್ತು ಶ್ರೀ ಬಸವರಾಜ ರಾಯರೆಡ್ಡಿ (ಯಲಬರ್ಗಾ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅಂಕೋಲ–ಹುಬ್ಬಳ್ಳಿ–ಬಳ್ಳಾರಿ–ಗುತ್ತಿ ಎನ್‌ಹೆಚ್–63, ಶೋಲಾಪುರ–ಚಿತ್ರದುರ್ಗ ಎನ್‌ಹೆಚ್–13, ತುಮಕೂರು–ಹೊನ್ನಾವರ ರಾಹೆ ಬಿಜಾಪುರ–ಹುಬ್ಬಳ್ಳಿ ಈ ರಾಷ್ಟ್ರೀಯ ಹೆದ್ದಾರಿಗಳನ್ನು 4 ಪಥ ಅಥವಾ 6 ಪದದ ಹೆದ್ದಾರಿಯಾಗಿ ಪರಿವರ್ತಿಸಲು ರಾಜ್ಯ ಸರ್ಕಾರವು ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಹೆ–63 ಅಂಕೋಲ–ಹುಬ್ಬಳ್ಳಿ–ಬಳ್ಳಾರಿ–ಗುತ್ತಿ ರಸ್ತೆಯಲ್ಲಿ 187 800 ಯಿಂದ 192 200 ರವರೆಗೆ (ಗದಗ ಪಟ್ಟಣ ಪರಿಮಿತಿಯಲ್ಲಿ) 4 ಪಥಗಳ ಅಗಲೀಕರಣ ಕಾಮಗಾರಿಗೆ ಕೇಂದ್ರ ಭೂ ಸಾರಿಗೆ ಮಂತ್ರಾಲಯ ಇವರಿಂದ ರೂ 475 00 ಲಕ್ಷಗಳಿಗೆ ಮಂಜೂರಾತಿ ದೊರೆತಿದ್ದು ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು ಕಾಮಗಾರಿಯನ್ನು ಕೈಗೊಳ್ಳಲಾಗುವುದು ಹೊನಪೇಟೆ–ಬಳ್ಳಾರಿ (ಕಿಮೀ 281 ರಿಂದ 344) ನಡುವಿನ ರಾಷ್ಟ್ರೀಯ ಹೆದ್ದಾರಿಯನ್ನು 4 6 ಪಥದ ರಸ್ತೆಯನ್ನಾಗಿ ನಿರ್ಮಿಸಲು ಕೇಂದ್ರ ಭೂಸಾರಿಗೆ ನಚಿವಾಲಯವು ಯೋಜಿಸಿದೆ ಈ ಸಂಬಂಧ ಡಿಬಿಎಫ್ಒ (Design Build Finance Operate) ಮಾದರಿಯಲ್ಲಿ 4 6 ಪದದ ರಸ್ತೆಯನ್ನಾಗಿ ನಿರ್ಮಿಸುವ ನಲುವಾಗಿ

ಪೂರ್ವಭಾವಿ ವಿನ್ಯಾಸ ಯೋಜನೆಯ ಆರ್ಥಿಕ ಅಂದಾಜು ಇತ್ಯಾದಿ ತಯಾರಿಸಲು ಪರಿಣಿತರಿಂದ ಬಿಡ್ ಆಹ್ವಾನಿಸಲಾಗಿದೆ ಕಿಮೀ 341 00 ರಿಂದ 343 00 (ಬಳ್ಳಾರಿ ಪಟ್ಟಣ ಪರಿಮಿತಿ) ರಲ್ಲಿ ನಾಲ್ಕು ಪಥದ ರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ

ಸೋಲಾಪುರ–ಚಿತ್ರದುರ್ಗ ರಾಹೆ–13 ರ ಕಿಮೀ 100 00 ರಿಂದ 290 00 ರವರೆಗಿನ (ಬಿಜಾಪುರ–ಹೊಸಪೇಟೆ) ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸಲು ಕೇಂದ್ರ ಭೂ ಸಾರಿಗೆ ಮಂತ್ರಾಲಯವು ಪರಿಗಣಿಸಿದ್ದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಸರ್ವೆ ಕೆಲವು ಪ್ರಗತಿಯಲ್ಲಿದೆ ಬಿಜಾಪುರ ಹುಬ್ಬಳ್ಳಿ ರಾಹೆ–218 ರಸ್ತೆಯು ಕಿಮೀ 190 00 ರಿಂದ ಕಿಮೀ 192 ರವರೆಗೆ ಈಗಾಗಲೇ 4 ಪಥದ ರಸ್ತೆಯನ್ನಾಗಿ ಪರಿವರ್ತಿಸಲಾಗಿದೆ

309 (641) ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ (ಕೊಪ್ಪಳ) ಮತ್ತು ಶ್ರೀ ಬಸವರಾಜ ರಾಯರೆಡ್ಡಿ (ಯಲಬರ್ಗಾ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿವಿಧ ಹಂತದ ಅಧಿಕಾರಿಗಳ ಮೇಲಿನ ಭ್ರಷ್ಟಾಚಾರ ಹಾಗೂ ವಿವಿಧ ದೂರಿನನ್ವಯ ಎಷ್ಟು ಅಧಿಕಾರಿ ಹಾಗೂ ನೌಕರರನ್ನು ಅಮಾನತ್ತಿನಲ್ಲಿಡಲಾಗಿದೆ,

ಆ) ಇವರುಗಳ ಮೇಲೆ ಯಾವ ರೀತಿ ಇಲಾಖಾ ಮಟ್ಟದ ವಿಚಾರಣೆಯನ್ನು ನಡೆಸಲಾಗುತ್ತಿದೆ, ಇವುಗಳನ್ನು ಶೀಘ್ರವಾಗಿ ಮುಗಿಸಿ ತಪ್ಪಿತಸ್ಥರಿಗೆ ಕಾನೂನು ರೀತ್ಯ ಕ್ರಮ ಜರುಗಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು,

ಇ) ಇಲಾಖಾ ವಿಚಾರಣೆಯು ಸಮಯಕ್ಕೆ ಸರಿಯಾಗಿ ಮೂರ್ಣ ಗೊಳ್ಳದೆ ಇದ್ದಲ್ಲಿ ವಿಚಾರಣಾಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳಾವುವು?

ಶ್ರೀ ಎಚ್. ಕೆ. ಪಾಟೀಲ್